ವಿಜಯ ಗಾಥಾ

ಮಲ್ಲಿಕಾ

" ಶ್ರೀ ಚಂಡಿಕಾಪಾದಾರ್ಪಣಮಸ್ತು "

ವಿ ಜ ಯ ಗಾ ಥಾ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
7, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು–560 025

Vijaya Gaatha in Kannada by 'Mallika'
Published by Lakshmi Prakashana,
7, Langford Road, Bangalore-560 025.

ಪ್ರಥಮ ಮುದ್ರಣ : ೧೯೭೧
ದ್ವಿತೀಯ ಮುದ್ರಣ : ೧೯೮೬
ತೃತೀಯ ಮುದ್ರಣ : ೧೯೮೪
ಚತುರ್ಥ ಮುದ್ರಣ : ೧೯೮೬

ಬೆಲೆ : ಆರು ರೂಪಾಯಿ

ಮುದ್ರಕರು
ನ್ಯೂ ಐಡಿಯಾಸ್
351, 10ನೇ ಬಿ ಮುಖ್ಯ ರಸ್ತೆ
ಜಯನಗರ
ಬೆಂಗಳೂರು-560 011

ವಿ ಜ ಯ ಗಾ ಥಾ

ಮಲ್ಲಿಕಾ

ಕುರಂಗನೇತ್ರಾಂ ಶರದಿಂದುವಕ್ತ್ರಾಂ
ಬಿಂಬಾಧರಾಂ ಚಂದನಗಂಧಲಿಪ್ತಾಮ್ ।
ದೃಶಾ ಗಲತ್ಕಾರುಣಿಕಾಸ್ರಯಾಂತಃ
ಸಂಮೋಹಯಂತೀಂ ತ್ರಿಜಗನ್ಮನೋಜ್ಞಾಮ್ ॥

ಪರಿವಿಡಿ

ವಿಜಯ ಗಾಥಾ

ಮಂಗಳವಾಗಲಿ

ಹೇ ಮಂಗಳದಾಯಿ ಅಂಬಾ ಭವಾನಿ !
ಮಂಗಳವಾಗಲಿ. ಸನ್ಮಂಗಳವಾಗಲಿ ಸತತಂ !
        ಭಾರತ ಸಾಮ್ರಾಜ್ಯ ಸ್ವಾತಂತ್ರ್ಯಕೆ
        ಗಹನದಿಂದ ಮೂಡಿದ ಗಣತಂತ್ರಕೆ
ಜಾತಿ ಭೇದವ ಕಳೆದು ನೇಹದಿಂದೆ
ಬಾಳಿ ಬದುಕಿ ನಾಡ ರಥವನೆಳೆಯೆ
        ಹೇ ಮಂಗಳದಾಯಿ ಅಂಬಾ ಭವಾನಿ !
        ಮಂಗಳವಾಗಲಿ ಸನ್ಮಂಗಳವಾಗಲಿ ಸತತಂ !

ಹೇ ಮಂಗಳದಾಯಿ ಅಂಬಾ ಭವಾನಿ !
ಮಂಗಳವಾಗಲಿ ಸನ್ಮಂಗಳವಾಗಲಿ ಸತತಂ !
        ನದಿ ಗಿರಿ ವನ ಸಾಗರ ಸರಿದ್ವರಾ
        ಹೊಲ ಮನೆ ಮಠ ಶಾಲಿವನ ವಿಸ್ತಾರ
ಶಿವ ಸಮಹಿತ ಹಿಮಾಲಯ ವರ ರಕ್ಷಾ
ಸಮ ಶೀತೋಷ್ಣ ಶುಭಾಂತವೀ ಧಾತ್ರೀ
        ಹೇ ಮಂಗಳದಾಯಿ ಅಂಬಾ ಭವಾನಿ !
        ಮಂಗಳವಾಗಲಿ ಸನ್ಮಂಗಳವಾಗಲಿ ಸತತಂ

— o —

ರಾಜಾ ರಾಮಮೋಹನ್ ರಾಯ್

ಮೂರ್ಖ ನರಮತಿಯ ಶುಷ್ಕ ಆಚಾರ–
ವ್ಯವಹಾರದಿ ಸಿಲ್ಕಿ ಮುಗ್ಧ ಸ್ತ್ರೀಜನ
ದಹಿಸಿರೆ ಧಗಧಗ ಜಗದ ಕಣ್ಣೆದುರೆ
ಅರ್ಥಹೀನ ಕರ್ಮತತಿಯ ಕಠೋರ
ಲೌಹ ಶೃಂಖಲಾ ಯಮಸದನಗಳಲಿ !
ಧರ್ಮದ್ವೈಸಿರಿಯೋ ಎನೆ ಕುಮತಿಯಂ
ಕಾಪಿಟ್ಟ ಮನುಜತತಿಯನೆದುರಿಸಿ
ಹೋರಿ ಮಡದಿಯರ 'ಸತಿ' ಪದ್ಧತಿಯಂ
ಕಿತ್ತೀಡಾಡಿದ ವರಹೃದಯಿ, ಪರಮ
ಸಾಸಿಗ ರಾಜಾ ರಾಮಮೋಹನ್ ರಾಯ್ !
ನಿನಗಂ ಸಹಸ್ರ ಸಹಸ್ರ ನಮನಂ !
ಕವಿ ಕೋಗಿಲೆಯ ಪರಮ ನಮನಂ !

— o —

ಜಯ ಭಾರತಿ

ಜಯ ಭಾರತಿ ! ಜಯ ಭಾರತಿ !
ಜಯವಾಗಲಿ ! ಜಯವಾಗಲಿ
ನಿತ್ಯ ಜಯ ವರೂಥನಿ !

ನೀಲ ನಭದಿ ಹಾರುತಿರಲಿ
ಧವಳ ಕೀರುತಿಯ ಬಾವುಟ !
ಭಗವಾನ್ ರಾಮ, ಕೃಷ್ಣ, ಹರಿಶ್ಚಂದ್ರ
ನಳ, ಧೃವ, ಗೌತಮ, ಗಾಂಧೀ
ವೀರರಾತ್ಮಸಿರಿ ಶಾಂತಿಗೆ
ಶ್ರೀನಿಕೇತನ ! ನವಚೇತನ !
ಭವ್ಯ ಮಹಿಶಾದ್ರಿಯದು
ಚಾಮುಂಡಿಯ ರುದ್ರರಂಗವೆನೆ
ದಿವ್ಯ ಲಲಿತಾದ್ರಿ ತಾನಹುದು
ಲಲಿತ ತರುಲತೆಗಳರಣ್ಯಚಯ !
ಗಂಗಾ ಯಮುನಾ ಕೃಷ್ಣಾ
ನದಿಗಳ ಸುರ ಸುಂದರ ತಡಿ
ನಿನ್ನಯ ಮೋಹನೀಯ ಉಡಿ !

— o —

ಜಯಹೇ ಜಯಹೇ ಬಂಗಾಳ ಮಾತೆ !

ಓ ಮಮ ಬಂಗ ಬಂಧು ! ಅಜ್ಞಾತ ಸಿಂಧು !
ಕವಿ–ಜ್ಞಾನಿ–ವಿಜ್ಞಾನಿಗಳ ಮನೋಜ್ಞ
ನಾಡಿಗೆ ನೀ ಸ್ನೇಹದಾರತಿಯೆತ್ತಿ
ಸ್ವಾತಂತ್ರ್ಯ ಪೂಣ್ಮೆಯಂ ಪೊಣ್ಮಿಸಿದೆಲ್ಲೈ !

ದೇಶಭಕ್ತಿಯಿಂ ಗಗನಾಂಬೋಧಿಗೆ
ತವ ನಾಮಧೇಯವೇರುತಿರೆ ನಿತ್ಯ,
ತಾಳದಾ ಶೋಭೆಯಂ ಕಾಳಶಕ್ತಿ
ಇಳಿಯಿತೇ ರಣರಂಗದ ಅಖಾಡಕೆ !

ಹೇ ಅಶಾಂತೆವಾಶಾಂತೆ ಚಿರ ಪ್ರಶಾಂತೆ !
ಭಾರತ ಕರುಣ ಮನೋಹರ ಸೋದರಿ,
ಶಂಕರಿ ಶುಭಂಕರಿ ವರ ಭಯಂಕರಿ !
ರುದ್ರ ಭೀಷಣ ಬಂಗಾಳ ಭೈರವಿ !

ನಲುಗಿತೆ ನಿನ್ನ ಕರುಳ ಕುಡಿ ದುರುಳರ
ರಕ್ತ ಸ್ನಾನ ಕಠೋರ ಅಭೀಪ್ಸೆಯಲಿ ?
ಘೋರ–ಭೀಕರ ಕಾಳಗವಂ ಹೂಡಿ
ಇರಿಯುತಿಹರೆ ನಿನ್ನೊಡಲನೀಟಿಯಲಿ ?

ರಕ್ಕಸಾವೇಶ ಪಾಶವೀವಾಹಿನಿ
ಕ್ರೂರತನದಿ ಘೋರ ಖಡ್ಗವನಾಂತು
ಕೊಚ್ಚಿ ಕಂಡರಿಸಿ ಸುಟ್ಟು ಕಿಚ್ಚಿನಲಿ
ವಿನಾಶಗೊಳಿಸಿತೆ ಒಡಹುಟ್ಟುಗಳಂ ?

ಕೆನ್ನೀರೋಕುಳಿಯ ಕೆಸರು ಕೆಚ್ಚನೆ
ಕಾಯುತಿರೆ ಬೆಂಬಿಸಿಲಗ್ನಿ ಕುಂಡದಿ
ಜೀವತೆತ್ತವರಾತ್ಮ ಸಂಕಟದಲಿ
ನರಳುತಿರಲ್ ದೆಸೆಗೆಟ್ಟು-ನೆಲೆಗೆಟ್ಟು !

→

ಬೆಬ್ಬಳಿಸ ಒಡಲುರಿ ಬೆಂಬೂದಿಯಲಿ
ಬೆಂದು ನರಳಿ ಜನತತಿಯು ಬೋರಿಟ್ಟು
ಮುನ್ನುಗ್ಗಿ ಹೋರಾಡುತಿರೆ ಜೀವದ
ಹಂಗನೆ ತೊರೆದು ಕೆಚ್ಚಿನುಬ್ಬರದಿಂ !

ನಂದಿದಳ್ತಿಯ ನಂದದನುತಾಪದಿ
ಒಡಲು ಧಗಧಗ ಬೇಯುತಿರೆ, ತಮ್ಮವರ
ನಾರ್ವಿಣಗಳ ಹೂಳಲಳವಿಲ್ಲದೆ ಬಹ
ಲಕ್ಷೋಪಲಕ್ಷ ಅಲಕ್ಷಿತ ಬಂಗಾಳಿ !

ಮಗುಳದ ಮುದ್ದು ಮೊಗಗಳ ಕಣ್ಣಿನಸು
ಸಂದ ಚೀರ್ವ ದನಿಗಳ ಕಿವಿ ಕೊರ್ರೈಸು
ಹೃದಯ ಹಿಸುಕಿದ ಭೀಕರ ಕಾವರ ;
ಚಿಟ್ಟು ಬಡಿದ ಭಯ ಭೀತಿಯ ದಾವರ

ತುಂಬಿರಲೆದೆಯ ಛಿದ್ರಿತ ಗೂಡಿನಲಿ
ಹಿಂದೆಳೆವ ಕಡು ಸಂಕಟ ಪ್ರಾಪ್ತಿಯಲಿ
ಬಳಲಿಹ ಹೃದಯ ವಿದ್ರಾಯಕವೀ
ಚಿತ್ರ ಭಾರತ ನೆರಳ ಗುಡಾರದಲಿ !

ಹೇ ದಾತೆ ಶಾಂತೆ ಸ್ವಾತಂತ್ರ್ಯ ಸಂಪ್ರೀತೆ !
ಸಸ್ಯ ಶ್ಯಾಮಲ ಭಾರತ ಸಹಜಾತೆ !
ವಿನಯ ವಿದ್ಯಾ ವಿಜ್ಞಾನ ಸುಶೋಭಿತೆ !
ತ್ಯಾಗಶೀಲೆ ನಮೋ ಬಂಗಾಳ ಮಾತೆ !

ಹಚ್ಚುತಿದೆ ಉಜ್ವಲ ನಂದಾದೀಪ
ಚೆಲ್ಲಿದ ಹಸಿ ಹಸಿ ರಕ್ತ ತೈಲದಲಿ !
ಬಂಗ್ಲಾ ವೀರಗಾಥೆಯಿದ ಬೆಳಗೆ
ಜಾಳ್ ಕೀರ್ತಿಯ ಬಾವುಟದಡಿ
ಹೇ ಸ್ವತಂತ್ರ ಬಂಗಾಲ ಲಕ್ಷ್ಮಿ !

— ೦ —

ಸತ್ಯ-ಶಿಸ್ತು-ಶಾಂತಿ

ಪಾರತಂತ್ರ್ಯದ ಪರಮಾವಧಿಯಲಿ ಸಿಲ್ಕಿ
ತೊಳಲಿ ಬಳಲಿ ಕಂಗೆಟ್ಟ ಮತಿಗತಿಗಂ
ನೀನಾದೆ ದಿವ್ಯ ಸತ್ಯಾರ್ಥ ಪ್ರಕಾಶ
ಹೇ ವಿಶ್ವನೇತಾ ಗಾಂಧೀ ಮಹಾತ್ಮಾ !

ದುಃಖ ದಾರಿದ್ರ್ಯ ರೋಗ ರುಜಿನಾದಿಯ
ಘನ ಘೋರ ರುದ್ರಾಟವಿಯಲಿ ಚರಿಸಿ
ನೀನಾದೆ ವರ ಶಿಸ್ತಿನ ವಿನಯೀ ಸೇವಕ
ಹೇ ವಿಶ್ವನೇತಾ ಗಾಂಧೀ ಮಹಾತ್ಮಾ !

ಯುದ್ಧ ಪ್ರೀತ ವಿಕರಾಳ ಮತಿಗೆ ಅನುನಯದಿ
ಶಾಂತಿವಾರ್ಧಿಯ ಕಮನೀಯ ಕಂಪನು ಸೂಸಿ
ನೀನಾದೆ ನಿತ್ಯ ವಿನಮ್ರತಾ ಶಾಂತಿದೂತ
ಹೇ ವಿಶ್ವನೇತಾ ಗಾಂಧೀ ಮಹಾತ್ಮಾ !

— o —

ಬೆಳಗಲಿ ಬೆಳಗಲಿ ಬೆಳಗಲಿ !

ಆಲಿಸಾಲಿಸು, ಗಣಭಾರತದ ಜಯಭೇರಿ !
ಪ್ರಲಯ ವರ್ಷವಂ ಕಾರುವ ರಣಭೇರಿ !
ಶತಶತಮಾನಗಳ ಸಿಡು ದಾಸ್ಯಂ ಕಳೆದು
ಮೊಳಗುತಿದೆ ನವೋನವ ಸಂಭ್ರಮವಾಣಿ
ಏಳು ಹೇ ವೀರವರ ! ಏಳು, ಎದ್ದೇಳು !
ಅಸಡ್ಡೆಯ ಬದಿಗಿಟ್ಟು ದುಡಿ ಹಗಲಿರುಳು,
ನಿನ್ನಯ ತಾಯ್ನಾಡ ಉಜ್ವಲ ಗಣತಂತ್ರ
ಕನ್ಯಾಕುಮಾರಿ ಹಿಮಾಚಲ ಪರ್ಯಂತ
ಅಚ್ಚಳಿಯದ ಧವಳ ಕೀರುತಿಯಂ ಪೊತ್ತು
ಬೆಳಗಲಿ ನಿತ್ಯ ಜಗದ್ಪಲಯದಾದ್ಯಂತ
ಬೆಳಗಲಿ, ಬೆಳಗಲಿ, ಬೆಳಗಲಿ !

— o —

ಸುಭಾಸ್ ಚಂದ್ರ ಬೋಸ್

ಸ್ವಾತಂತ್ರ್ಯ ಯಜ್ಞ ಧಗಧಗಿಸುತಿರೆ ವಿಜಯ ಪ್ರೂರ್ವಮೆ
ನೀನಾದೆ ಅದ್ಭುತ ಅಮರಶ್ರೀ ! ಭಾರತ ಜನನಿಯ
ಮಹಾ ಸಿರಿವಸಿರಿನಿಂ ಉದ್ಭವಿಸಿ ಕೀರುತಿವೆತ್ತೆ !
ರುಗ್ಣ ಶೃಂಗಾರದಿ ಮಲೆತ ಜಡಚೇತನಕೆ ಜ್ವಲಿತ
ನಿನ್ನ ಚಿತ್ತಾಗ್ನಿ ಭೀಮಿಸಿತು ಭವ್ಯ ಭಾವಾಗ್ನಿಯಿಂ
ಹೇ ಪ್ರಚ್ಛನ್ನ ಕಲ್ಕಿ ! ಸುಭಾಸ್ ಚಂದ್ರ ಬೋಸ್ !
ಸ್ವಾತಂತ್ರ್ಯ ಸಮರದಲಿ ಕಂಗೆಟ್ಟು ನೆಚ್ಚುಗೆಡುತಿರ್ದ
ಮತಿಗೆ ನೀನಾದೆ ಉಜ್ವಲ ಕೆಚ್ಚಿನ ಕಿಡಿ ಕಣಾ !
ಆಂಗ್ಲರ ಗುಂಡಿಗಳುಕದೆ ಸೆರೆಯಿಂ ಸೀಳಿ ಹೊರಬಿದ್ದು
ವನ್ಯ ಕೇಸರಿಯೊಲು ರಂಜಿಸಿ ಹುತಾತ್ಮರ ಘೋರ
ಮಸಣದಲಿ ಉಗ್ರಗಾಮಿಗಳ ದಂಡನೆ ಕಟ್ಟಿ
ವಿರಮಿಸಿದ ಭಾರತಪುತ್ರ ಹೇ, ಸುಭಾಸ್ ಚಂದ್ರ ಬೋಸ್,
ದಾರಿದೀಪ ತೋರ್ವೈ ನಿತ್ಯ ಮಮ ಮನುಕುಲ ಕೋಟಿಗೆ !

ಉಷೇ ಉಷೇ

ಉಷೇ ಉಷೇ ಸಾರಿತು ಸುಪ್ರಭಾತೆ!
ಧ್ವಾನದಿಂ ಪಾಡಿ ನವವೀರ ಗಾಥೆ!
ಸಪ್ತ ಸರ್ಪ ಚೇತನವೇಳೆ ಊದಿ
ಪೂರ್ಣ ತಾನದಿಂದಲಿ ಸ್ವರಭೂರಿ!

ಬಾಳಿದೊಂದು ಕೊಳಗುಳವೆನೆ ಅಂಜದೆ
ಕಾದು ಪ್ರಚಂಡ ಭೈರವ ವೇಶದಿಂದೆ!
ಕಾದದೊಡೆ ಬದುಕೇಕೆ! ಕಾದುವೆನೆನೆ
ಜಯಾಜಯಂ ಜೇವಡೆದು ಗುರಿಕಾಂಬೆ!

ರಣರಂಗವಿದು ಈ ಮೃತಜೀವನಿಯು
ನವೋತ್ಥಾನಕೆ! ಮೇಣ್ ಉತ್ಕ್ರಾಂತಿಯು
ಜಗಜ್ಜೇತಾರಕೆ ಸೆಣಸಿ ಗೆದ್ದೊಡೆ
ಇದ್ದೆಡೆಯಲಿ ಸಗ್ಗ ತಾನಿಹುದು ಗಡ!

— o —

ಓಡಿ ಬನ್ನಿ ; ಓಡಿ ಬನ್ನಿ ;

ಓಹೋ ! ಓಡಿ ಬನ್ನಿ ! ಓಡಿ ಬನ್ನಿ !
ಜಿಗಿದು ಬನ್ನಿ ನಮ್ಮ ನಾಡ ಮಕ್ಕಳೇ !
ಕೆಚ್ಚಿನಿಂದ ಬನ್ನಿ ದಿಟ್ಟ ಚಿಣ್ಣರೇ !
ನಾಡಗುಡಿಗೆ ಗೋಪುರ ಕಟ್ಟ ಬನ್ನಿ !
ಗಗನ ತಲಕೆ ಬಾವುಟ ಹಾರಿಸ ಬನ್ನಿ !
ಚಿನ್ನದ ನಾಡಿನ ಚೆಂದದ ತೇರನೆ
ಎಳೆಯ ಬನ್ನಿ ; ಭುವಿಯ ನನ್ನಿಗೆ ಮುದವ
ತನ್ನಿ ; ಓ ನಮ್ಮ ನಾಡ ಮಕ್ಕಳೇ !
ಕಲಿತು ಕಲಿತನದ ಜಯಭೇರಿಯ
ಹೊಡೆಯ ಬನ್ನಿ ; ನಮ್ಮ ನಾಡ ಗುಡಿಯಲಿ
ನಂದಾದೀವಿಗೆಯ ಹೊತ್ತಿಸ ಬನ್ನಿ !
ಘಣಘಣ ಗಂಟೆಯ ಬಾರಿಸ ಬನ್ನಿ
ಸಂತಸದಿಂ ದಿಗ್ವಿಜಯವ ಘೋಷಿಸ
ಬನ್ನಿ ! ಕವಿಯ ಮನಕೆ ಮುದುವ ತನ್ನಿ !
ಜಯ ಜಯ ಜಯ ಜಯ ಜಯತೇ !

— o —

ಜವಹರಲಾಲ ನೆಹರೂ

ವರ ರಸೆಯುಡಿಯ ಸಿರಿ ಹಸುರಿನಲಿ ನೀ ಮೂಡಿ
ಜಗ ಹೃದಯದಲಿ ನಿಂದೆ ಹೇ ಮತಿಲಾಲನೇ !
ನಿನ್ನ ತೀಕ್ಷ್ಣ ಮತಿಯಲುಗಿನಲಿ ಸಂಚರಿಸಲುರಿ
ಅರ್ಗಳವು ಹೇಳಾ ? ಮೋಹ್ ಬಲುಮೆ ತುಂಬಿದೆದೆ
ಮಿಂಬಟ್ಟೆಯ ನಿರ್ಮಲ ಜಾಲದಿ ಸಿಲ್ಕಿ ಜಗಮತಿ
ವೈಮರೆತು ಮುಗ್ಧಗೊಳೆ ನೀ ಮಾಹಾತ್ಮನೆ ವಲಂ !
ಶತಶತಮಾನದಿಂ ಪಾರತಂತ್ರ್ಯದಲಿ ತೊಳಲಿ
ಜಡವೆತ್ತ ಭಾರತ ಮಹಾಜೇತನ ರತಿಯಂ
ಒಡಿದೆಬ್ಬಿಸಿ, ಭೋಂಕನೆ ಎಳೆದೊಯ್ದು ಭಯಂಕರ
ಸ್ವಾತಂತ್ರ್ಯ ಸಮರದೆಡೆಗೆ, ವಿಪ್ಲವಕಾರಿಯೆನೆ
ದಿಟ್ಟ ದಳಪತಿ ನೀನಾಗಿ ಕಟಿ ಬಂಧನಗೈದೆ !
ಎಂತು ಗಳಿಸಿದೆ ಗಣತಂತ್ರ ಅಂತು ಆಳಿ ಬಾಳ್ದ,
ಸಿಂಹ ಶಾಬಕ ಸಚ್ಚರಿತ್ರ ಮಹೋನ್ನತಿಯಲಿ !
ಹೇ ವರ ಬಂಧು, ಜವಹರಲಾಲ ನೆಹರೂ !
ಪಡೆಯಲಿ ನಿನ್ನ ದಿವ್ಯಾತ್ಮಂ ವರ ಚಿರ ಶಾಂತಿ!
ಕವಯಿತ್ರಿಯ ಮನೋಭವ ಹರಕೆ ಕಣ !

— o —

ಮಹಾ ವೈಜಯಂತಿ

ಬಾಂಗ್ಲಾ ಗೋಳಿನ ಕರೆಯಂ
ಕೇಳಿ, ವೀರ ಹಸ್ತವ ತೋರಿ
ಸಂಭ್ರಮದಿ ಮಿಡಿಯುತಿದೆ ನೋಡಿ,
ಭಾರತದ ಮಹಾ ವೈಜಯಂತಿ !

ರುದ್ರಘೋರ ಯುದ್ಧವ ಹೂಡಿ
ಶತ್ರುವಂ ಚೂರ್ಣೀಕರಿಸಿ
ಸಂಭ್ರಮದಿ ಮಿಡಿಯುತಿದೆ ನೋಡಿ,
ಭಾರತದ ಮಹಾ ವೈಜಯಂತಿ !

ಜಾತಿಮತದ ದ್ವೇಷ ಕಳೆದು
ಎಲ್ಲ ಜನರ ಸ್ನೇಹ ಬೆಳಸಿ
ಸಂಭ್ರಮದಿ ಮಿಡಿಯುತಿದೆ ನೋಡಿ,
ಭಾರತದ ಮಹಾ ವೈಜಯಂತಿ !

ದೇಶವೆಲ್ಲ ಒಂದುಗೂಡಿ
ನಾಡಗುಡಿಯ ತೇರನೆಳೆದು
ಸಂಭ್ರಮದಿ ಮಿಡಿಯುತಿದೆ ನೋಡಿ,
ಭಾರತದ ಮಹಾ ವೈಜಯಂತಿ !

— o —

ಆಲಿಸಾಲಿಸಿ....!

೧

ಅದೋ ಆಲಿಸಾಲಿಸಿ....!
ದಿಗಂತರದಿಂ ದಿಗಂತರಕೆ
ಅನುರಣಿಸುತ್ತಿದೆ
ಶಾಂತಿ ಸಮರದಾ
ಭೈರವ ಡಮರು ಡಿಂಡಿಮ
ಅದೋ ಎಡೆಬಿಡದೆ ಅನುರಣಿಸುತ್ತಿದೆ,
ಕಿವಿಗೊಟ್ಟಾಲಿಸಾಲಿಸಿ !
ಹೇ ಅಖಿಲ ಭಾರತೀಯರೆ !
ಕವಿ ಸೊಲ್ಲಿನ ಕರೆಯ ಕೇಳಿ

೨

ಹಾ....! ಏನಿದೇನಿದು ?
ಎಲ್ಲಿಯ ಗೆಜ್ಜೆಯ ಮಧುರ ನಾದ ?
ಝಣಕು ! ಝಣಕು ! ಝಣಕು !
ವಿವಿಧ ಗದ್ದುಗೆಗಳಲ್ಲಿ ಧೀಂಕಿಡುತಿದೆ
ನಟರಾಜನ ನಾಟ್ಯ ವೈಖರಿ !
ಕಿರುಗೆಜ್ಜೆಯ ಕಾಲಂ ಕುಟ್ಟಿ ಕುಟ್ಟಿ !

→

ಡೋಲು ಡಮರು ತಟ್ಟೆ !
ಹೇ ನಾಟ್ಯವರೇಣ್ಯರೇ
ನಿಲ್ಲಿಸಿ ನೃತ್ಯರಂಗದಟ್ಟಹಾಸ ;
ಬಿಂಬಿಸಿ ಸದ್ದಿಲ್ಲದ ಶಾಂತಿಯಂ
ಆಲಿಸಿರಿ ಆ ಭೈರವ ಭೇರಿ !
ಸಂಭ್ರಮದಿಂ ಕರೆ ನೀಡುತಿದೆ
ಸಮೃದ್ಧ ರಾಷ್ಟ್ರ ನಿರ್ಮಾಣಕೆ !

೩

ನೋಡಾ ಹಾಳು ಹಂಪೆಯಲಿ
ಸಂಚರಿಸುತಿವೆ ನರಿ ಹಂದಿಗಳಿಂದು !
ಮಹಾ ಸಾಮ್ರಾಜ್ಯ ವೈಭವವನು
ಈ ಸ್ಥಿತಿಗಿಳಿಸಿತೇ ರಣಹೇಡಿ ಕುಣಿತ ?
ಭಕ್ತಿಯಂ ಈ ಪರಿಯಲಿ ತೋರಿದೊಡೆ
ಹಂಪೆಯ ಗತಿಯೆ ಎಲ್ಲೆಡೆಯೂ ಕಣಾ !
ಕಾಲ್ಗೆಜ್ಜೆಗಳ ನೋಂಪಿನಲಿ
ವೀರಭಕ್ತಿಯ ವರ ಖಡ್ಗವ ಪಿಡಿಯೆ
ಶಕ್ತಿಯ ಕಂಕಣವು ಮುಕ್ತಿಗೆ ದಾರಿ ಕಣಾ !

ಚೀನೀಯರನೋಡಿಸಲ್ಕೆ
ಪಾಕಿಸ್ತಾನೀಯರನಟ್ಟಲ್ಕೆ
ಸಿಡಿದೆದ್ದಿದೆ ಭಾರತ ಧಾತ್ರೀ !
ಜಯ ಕಾಳಿ ! ಜಯ ದುರ್ಗೆ !
ಜಯ ಜಯ ದಶಕಂಠಾರಿ
ಎನ್ನುತ ನುಗ್ಗಿರಿ ಎಲ್ಲಾ !
ಝಣಕು ಝಣಕು ಸಾಕಿನ್ನು
ಬಡಿದು ಬಾರಿಸಿ ಭೈರವ ಜಯಭೇರಿ !
ಜಯ ರುದ್ರ ! ಜಯ ಪಾರ್ಥ !
ಜಯ ಜಯ ಗೀತಾಚಾರ್ಯ !
ಜಯ ಜಯ ಜಯ ಜಯ ಜಯಹೇ !

— o —

ವಿಶ್ವಮಾನಿನಿ !

ತಾಯಿ ಭಾರತಿ ಎತ್ತುವೆ ಆರತಿ
ಜಯತು ಜಯತು ಮಂಗಳದಾಯಿ !

ಕನ್ಯಾಕುಮಾರಿ ಹಿಮಾಚಲ
ಪರ್ಯಂತ ಧೌತಜಲವಾಹಿನಿ !
ಜನಜನಿತ ಲೋಕ ಜೀವನೀ
ಘನ ಶಾಲಿವನ ವಿಸ್ತರಿಣಿ !

ತಾಯಿ ಭಾರತಿ ಎತ್ತುವೆ ಆರತಿ
ಜಯತು ಜಯತು ಮಂಗಳದಾಯಿ !

ನಿತ್ಯ ಗಿರಿತರಂಗ ಶೋಭಿತ
ಸಸ್ಯ ಶ್ಯಾಮಲ ಸಿರಿಧರಣೀ !
ಸತ್ಯ ಧರ್ಮ ನೀತಿ ವರ್ಧಿನಿ
ವರ ಜನನೀ ವಿಶ್ವಮಾನಿನಿ !

ತಾಯಿ ಭಾರತಿ ಎತ್ತುವೆ ಆರತಿ
ಜಯತು ಜಯತು ಮಂಗಳದಾಯಿ !

— o —

ಇಂದಿರಾ ಪ್ರಿಯದರ್ಶಿನಿ

ತವ ಸುಖ ಸಾಧನೆಯೆ ಪರಮ ಗಂತವ್ಯವೆನೆ
ಘನ ಸ್ವಾರ್ಥ ಸೂತ್ರದಿಂ ವಿನೂತನ ಜಾಲವಂ
ನೆಯ್ದು, ನಿನ್ನ ದೇಗುಲ ಪಾಳ್ಗಿಡಹಲೆಳೆಸಿದ
ಧೂರ್ತ ದುರ್ಭೇದ್ಯ ಕುಮತಿಯ ಕುಠಾರವಂ
ಮಹಾ ಕಾಳಿಯೆನೆ ಕಿತ್ತೊಗೆದೀಡಾಡಿ ವರ
ದಿಗ್ವಿಜಯ ಗಳಿಸಿದೇ ನೀ ದಲ್ ಯಶೋಲಕ್ಷ್ಮಿ!
ಕರಾಳ ಸಮರ ಶೇಷಂ ರಾಷ್ಟ್ರ ಪ್ರಾಕಾರದಲಿ
ರಣ ಫಣಿಯಂ ಚಾಚಿ, ಗರಳಂ ಕಾರಿ ಜನ
ಕೋಟಿಯಂ ನಿಷ್ಕರುಣೆಯಿಂ ಕೊಲ್ಲುತಿರಲ್
ಮಾರ ವೈರಿಯೆನೆ ಯುದ್ಧಭೂತವಂ ಬಗ್ಗು ಬಡಿದು
ಜಸವಂ ಪಡೆದೆ ಶಾಂತ ಶರಧಿಯ ನೀ ಹೋಲಿ!
ಭರತಖಂಡದ ಸ್ತ್ರೀಶಕ್ತಿ ನೀನಹುದು ದಿಟಂ!
ಭಾರತ ಪುತ್ರಿ! ಹೆ, ಇಂದಿರಾ ಪ್ರಿಯದರ್ಶಿನಿ!

— o —

ಭುಜಬಲ

ಜೀವನ ಸಮರದ ರಣ ಕಹಳೆಯ ಕೇಳಿ,
ಮೊಳಗುತಿದೆ ಮನಮನದಿ ನವಯುಗವಾಣಿ !
ಬಾಳ್ವೆಯ ಪಾಳ್ಗುಡಿಗೆ ಹತ್ತಿದಲಸಿಕೆಯ
ಬದಿಗೊತ್ತಿ ನೀಡಿ ಶಕ್ತಿಯ ಸಾರೂಪ್ಯ !

ಎದೆ ಬಿಲದಿ ಜೀವನೀಶಕ್ತಿ ಮಾರ್ಪೊಳೆಯೆ
ಜಳಜಳ ಪರಿವುದು ಜೀವನದ ಕಾವ್ಯ ಗಡ !
ಭಾರತಾಂಬೆಯ ಅಡಿದಾವರೆಗರ್ಪಿಸಿ
ನಿನ್ನ ಬಾಳಿಲೆ ನೀ ವರ ಭಾರತೀಯ !

ತೇಜೋಬ್ಧಿಯಲಿ ಮಿಂದು ಭೀಮನಂದದಿ
ಹೋರಿ ತೇಜವಾದವನಾ ನಿಜ ತೇಜ
ಸಹಸ್ರ ಸಹಸ್ರವೈಸೆ ಜನ್ಮಭೂಮಿಗೆ
ಭುಜಬಲವುಲ್ಲೆ ನಿತ್ಯ ನೂತನವುಪ್ಪಿ !

— o —

ಜಗಜ್ಜೇತಾರಂ !

ಬಾಂಗ್ಲಾ ಭೂಮಿಯಲಿ ತಾ ಭುಗಿಲೆದ್ದು
ಧಗಧಗಿಸಿ ಜಗದ ಮನಸೆಳೆದಿರುವೀ
ಭಾರತಸಮರಂ ಧರ್ಮರಣ ಕಣಾ !

ಯಾರೂ ಕೇಳದಿರೆ ಗೋಳಿನ ಕಾಳೆ
ನರಕೋಟಿಯ ಕಣ್ಣೀರು ಚೆಲ್ಲಿ ಸೂಸಿ
ಒರಲುತಿತ್ತು ಗದ್ಗದ ಸ್ವರವಿತಾನ !

ಧೂರ್ತ ಪಾಕೀಸ್ತಾನ ಪರಚಿ ಗಾಯವೊ-
ಡೆಸಿ ನುರ್ಗಿದೊಡೆ ಬಿಡುವುದೇಂ ಭಾರತ ?
ಬಗ್ಗಿ ಬಡಿದು ನುಚ್ಚುಗೈಯಿತು ಕ್ಷಣದಿ !

ಧರ್ಮಚಕ್ರ ಸುತ್ತುತಿರೆ ಎದೆಗೊಟ್ಟು
ಸಾಯ್ವುದೆ ನಿರ್ವಾಣದ ಮಾಂಗಲ್ಯ !
ಸತ್ಯ ದರ್ಶನವೆ ಜಗಜ್ಜೇತಾರಂ !

— o —

ನವ ದೀಕ್ಷೆ ತೊಡಿ ಇಂದೇ

ಹೇ ಮನುಕುಲ ಕೋಟಿಗಳೇ !
ದೇಶಮಾತೆಯು ಕರೆ ಕೇಳಿ !
ಗುಡಿ ಗೋಪುರಗಳಿಂದ ಇಳಿದು ಬನ್ನಿ !
ಚರ್ಚು ಮಸೀದಿಗಳನ್ನು ಬಿಟ್ಟು ಬನ್ನಿ !
ಹೊಲ ಮನೆ ಮಠಗಳನ್ನು ಬಿಟ್ಟು ಬನ್ನಿ
ನಾಡಗಡಿಯ ರಕ್ಷಣಾ ಯಜ್ಞದಲಿ
ಬೀರ ತುಳಿಲಾಳಿನೆ ಬಿಲ್ಲನು ತನ್ನಿ !
ಹೆಜ್ಜೆ ಹೆಜ್ಜೆಯಲಿ ಕೆಚ್ಚಿನ ಕಿಡಿಯಂ
ಕಾರಿ ಜನ್ಮಭೂಮಿಗೆ ವಿಜಯ ತನ್ನಿ !
ನುಗ್ಗಿ ಬಹ ಗೋಲಿಗಿನಿತು ಬೆದರದೆ
ಮರುಗೋಲಿ ತೂರಿ ಓಡಿ ಓಡಿ ಬನ್ನಿ !
ಕೋಟಿಕೋಟಿ ರಕ್ಕಸ ವೈರಿಗಳಂ
ನಿಟಿ ನಿಟಿ ಮುರಿದೊಟ್ಟಿ ರಣರಂಗದಲಿ
ಭೈರವನಾರಿಗೆ ರಕ್ತತರ್ಪಣವ
ನೀಡಲು ನವದೀಕ್ಷೆ ತೊಡಿ ಇಂದೇ !

— o —

ಜಯು ಜಯು ಬಾಂಗ್ಲಾ

ಬಾಂಗ್ಲಾ ನವ ಬಾಂಗ್ಲಾ ! ಜಯು ಬಾಂಗ್ಲಾ !
ಜೈ ಜೈ ಜೈ ಜೈ !
ಬಾಂಗ್ಲಾ ಜೈ ಬಾಂಗ್ಲಾ ! ಜೈ ಬಾಂಗ್ಲಾ !
ಜೈ ಜೈ ಜೈ ಜೈ !
ಜೈ ಶಕ್ತಿಮತೀ ಮುಕ್ತಿವಾಹಿನೀ !
ಜೈ ನವೋದಿತ ಸಾಮ್ರಾಜ್ಯಧಾತ್ರಿ !
ಗಗನಾಂಗಣದಿ ನಿತ್ಯ ಮೊಳಗಲಿ ತವ
ಸತ್ಯದನುವರ ಜಯಶ್ರೀ ಝೇಂಕಾರ !
ಮತ್ತೆ ಬೆಳಗುತಿರಲಿ ಮನುಜ ಮನ-ಮತಿ
ತಾದಾತ್ಮ್ಯ ಭಾವ ಕೀರ್ತಿ ಶ್ರೀಕಾರ !

— o —

ಪಾವನರಾಗಿ !

ನೋಡದೋ ದಿಗ್ದಿಗಂತದಿಂ ಮಹಾ
ಕಲ್ಕಿಯಾವೇಶದಿ ತಾ ಮುನ್ನುಗ್ಗಿ
ನಿಲಯ ವಿಪ್ಲವ ತಾಂಡವಗೈಯ್ಯುತ್ತ
ಬರುತಿಹಳು ಸಿಡಿಲ್ಮುಖಿ ರಣಮಾರಿ
ಭೈರವ ಭೇರಿಯ ಬಡಿದು ಬಾರಿಸುತ !
ರಣಗೀತೆಯ ಪಾಡಿ, ಕ್ಷುದ್ರ ನೀತಿಯ
ತೋರಿ, ಕಲ್ಕಿಗಳ ಕದನರಂಗದಲಿ,
ಸಾಯ್ವರ ಶಾಪ, ಬೀಳ್ವರ ಅನುತಾಪ,
ಗೆದ್ದವರ ಅಟಾಟೋಪದಲಿ ನುಗ್ಗಿ
ಬರುತಿಹಳು ಪ್ರಚಂಡ ಕಾಳಿ ಕರಾಳಿ !
ನೂರು ಸಿಡಲ್ಗಳ ಹೂಡಿ ಬಿಲ್ಲು ಬಾಣವ
ಕೋದು, ಕೈಗೆ ಸಿಕ್ಕಿದವರ ಸದೆ ಬಡಿದು
ಸಿಡಿಲ್ನಾದಗೈದು ಹಲ್ಕಡಿಯುತಿಹಳೈ !
ಎಲ್ಲಂದರಲ್ಲಿ ತಟ್ಟನಣಿಯಾಗೆ
ನಾಡ ಯೋಧ ಧೀರ ಮಲ್ಲ ಮಕ್ಕಳೇ !
ಬನ್ನಿರೈ ! ಓಡಿ ಬನ್ನಿರೈ ! ತಾಯ ಕರೆಗೆ
ನಿಗೊಟ್ಟು, ಭುಜಕೆ ಭುಜವ ಕೊಟ್ಟು
ರಣ ಮಾರಿಯ ಬಡಿದು ಕೊಚ್ಚಿ ಕಂಡರಿಸಿ
ದೇಶ ರಕ್ಷಣೆಗೈಯ್ದು ಪಾವನರಾಗಿ !
ನೀವೆಂದೆಂದೂ ಪರಿಪಾವನರಾಗಿ !

— o —

ಹೇ ಜಯ ಬಂಗಾಳ !

ಹೇ ಜಯ ಬಾಂಗ್ಲಾ ! ಜಯ ಬಾಂಗ್ಲಾ ! ಜಯ ಬಾಂಗ್ಲಾ !
ಜಯ ಜಯ ಜಯ ಜಯ ಜಯಹೇ !

ಸಸ್ಯಶ್ಯಾಮಲ ಗಿರಿವನ ಶೋಭಿನೀಂ
ಫುಲ್ಲ ಸುಮ ಸಮುಚ್ಚಯ ಸುಗಂಧಿನೀಂ
ಪುರಾಣ ಪ್ರಸಿದ್ಧ ಪುಣ್ಯವನ ವಿಹಾರಿಣೀಂ
ಸುಜನ ಜೀವನ ಶತಪಥ ಮೋದಿನೀಂ

ಹೇ ಸಾಹಿತ್ಯ ರಸಋಷಿಗಳ ಸುಂದರ ಬೀಡೆ
ನಿನ್ನ ಕರುಳ ಕುಡಿಗಾಯಿತೇ
ಧೂರ್ತ ಪಾಶವೀ ಬಲದ ರಕ್ತ ಸ್ನಾನ !
ಅಧಿಕಾರ ಬೇಗೆ ರೊಚ್ಚಿಗೆದ್ದು
ಪಾಳ್ಗೆಡವಿತೆ ನಿನ್ನಯ ಪುಷ್ಪೋದ್ಯಾನ !

ಹೇ ಭಾರತ ಮಾತೆಯ ಸಂಜಾತೆ !
ದಿಟ್ಟತನದಿ ಶತ್ರುವಂ ಬಡಿದು
ಅನಂತ ಶೃಂಖಲೆಯುಂ ಕಿತ್ತೊಗೆದೆ
ಬಾರಿಸು ಅದ್ಭುತ ಜಯಭೇರಿ !
ಜಗದೆದೆ ಮಿಡಿಪ ಭೈರವಭೇರಿ !

— o —

ಜಯ ಜಯ ಭಾರತ ಮಾತೆ!

ಮನಕುಲ ಕೀರ್ತಿ ಗಣತಂತ್ರಿ
    ಕವಿಜನ ರಸಮತಿ ಭಜಂತ್ರಿ
ಸರ್ವಕಲಾ ರಕ್ಷಾಯಂತ್ರಿ
    ಜಯ ಜಯ ಭಾರತ ಮಾತೆ
ಜಯ ಜಯ ಜಯ ಜಯ ಜಯಹೇ !

ಸಹೃದಯೆ ಸುಸಂಸ್ಕೃತ ಮಾತೆ
    ಸ್ವರ್ಣ ಕುಂಭಿನಿ ಹೇ, ಅತೀತೆ
ಸಕಲ ತತ್ತ್ವ ಸ್ತನ್ಯದಾತೆ
    ಜಯ ಜಯ ಭಾರತ ಮಾತೆ
ಜಯ ಜಯ ಜಯ ಜಯ ಜಯಹೇ !

ವರ ಮುನಿಜನ ಸಂಸೇವಿತೆ
    ಶಕ್ತಿ ಭಕ್ತಿ ಮಹಾಶ್ವೇತೆ
ಸತ್ಯ ಧರ್ಮ ನಿತ್ಯ ಪ್ರೀತೆ
    ಜಯ ಜಯ ಭಾರತಮಾತೆ
ಜಯ ಜಯ ಜಯ ಜಯ ಜಯಹೇ !

— o —

ಬಂಗಾಳ ಜನನಿ

ದಯದಿಂ ಜಗದುದ್ಭವ ಕಣಾ ! ಕ್ಷಮೆಯಿಂ
ಸಂರಕ್ಷಣೆ ಪಾಣೋ ಹೇ ವೀರವರಾ
ರೋಷವೇ ಪಾಪವಿಪಾಕ-ಜನ್ಮವಿನಾಶ
ಕೇಳ್, ಯುದ್ಧ ಸಂಭ್ರಮ ವಿಕರಾಳ ಪುತ್ರಿಯೆ !

ದೇಶಭಕ್ತಿಯಿಂ ಸ್ವಾತಂತ್ರ್ಯ ಪೂಜೆಗೈದ
ಲಕ್ಷ ಲಕ್ಷ ಲಕ್ಷ ಮಂದಿ ಮುಗ್ಧರಂ
ಕಗ್ಗೊಲೆಗೈದು ಚೆಲ್ಲಿ ಕೆನ್ನೀರಂ
ಈಜಾಡಿತೇ ಧೂರ್ತ ಪಾಕಿಸ್ತಾನ ?

ದೇಶಕಾಗಿ ದುಡಿದು ದೇಶಕಾಗಿ ಮಡಿದು
ಕೀರ್ತಿವೆತ್ತವರ ಸ್ಫೂರ್ತಿಯಿಂ ಜೀವಡೆಯೆ
ಜೀವನಗೀತ–ರಣದೀಕ್ಷೆಯ ಅದ್ಭುತ
ಪ್ರಶಾಂತ ಉದ್ಘೋಷ ಉಘೇ ಉಘೇ !

ಆಕರ್ಷಿಸಲಾ ಜನತತಿಯಂ ಬೆದರದೆ
ಮುನ್ನುಗ್ಗಿ ಚಟಪಟ ಬೆಂದುವೋಗೆ ಅಗ್ನಿ
ಪ್ರಕಾಂಡದಿ ಕಂದರ ಹೆಣಗಳಂ ಉಡಿಯಲಿ
ಪೇರಿಸಿ ಮಿಡಿದಳಶ್ರು ಧಾರೆಧಾರೆಯಾಗಿ
ಬಂಗಾಳ ಜನನಿ !

— o —

ಏಳು, ಎದ್ದೇಳು !

ಏಳು, ಎದ್ದೇಳು ! ಉಜ್ವಲ ಭಾರತ !
ಹೇ ಅಖಂಡತರ ನಿಖಿಲ ಜಾಗೃತ !

ಕಿವಿಗೊಟ್ಟು ಕೇಳು ಚೈತನ್ಯ ಪುರುಷ !
ನೆರೆ ನಾಡಿನ ಗೋಳು ಕಡ್ಡಾಯ ಕರೆಯು
ನೀಡುತಿದೆ ನಿನಗೆಲೆ ಕವಿವಾಣಿಯಲಿ

ಏಳು ಎದ್ದೇಳು ! ಉಜ್ವಲ ಭಾರತ !
ಹೇ ಅಖಂಡತರ ನಿಖಿಲ ಜಾಗೃತ !

ರಣ ಪಿಶಾಚಿಯು ಕೆರಳಿದ ಕಾಳಿಯೆನೆ
ನೆತ್ತರ ಪಿಪಾಸೆಯಲಿ ಮರ್ದಿಸುತಿರೆ
ಜನತೆಯಂ ಕ್ರಿಮಿಕೀಟಗಳಂದದಿ
ಪಾಶವೀ ಬಲಕೆ ಇದಿರು ನಿಲ್ಲಲೆನೆ

ಏಳು, ಎದ್ದೇಳು ! ಉಜ್ವಲ ಭಾರತ !
ಹೇ ಅಖಂಡತರ ನಿಖಿಲ ಜಾಗೃತ !

— o —

ಸ್ವಾಗತ

ಸ್ವಾಗತ ಸ್ವಾಗತ ಸ್ವಾಗತವು
ನಿನಗೆ ಸ್ವತಂತ್ರ ಬಂಗಾಳ ಧಾತ್ರೀ !

ಶತ ಸಹಸ್ರ ಮಂದಿ ದೇಶಿ–
ಗರ ಬಲಿದಾನದಿಂ ಉದಿಸಿ
ರಕುತದೋಕುಳಿಯಲಿ ಮಿಂದೆ
ವಿಶ್ವ ಪ್ರಜ್ಞೆಗೆ ದುರ್ಧರ್ಶ
ವೇದಿಕೆಯೆನೆ ಹೇ ಕಡುಗಲಿ !
ತವ ಸ್ವಾತಂತ್ರ್ಯ ಸಂಪ್ರೀತಿ
ಶುಭೋದಯವೆನೆ ಎನಿತೆನಿತು
ರುದ್ರ ಭೀಷಣವೀ ರೌದ್ರ
ಶತ ಚಿಂತನ ; ರೋಮಾಂಚನ !
ದೇವಾಸುರ ಸಂಘರ್ಷಣ !
ನಿನ್ನ ಧಮನಿಯ ರಕುತದಲಿ
ತೇಲಾಡಿತೇ ಲೋಕಾಲಯ !
ಅವತರಿತ ನೂತನ ಭೈರವ
ಚರಣದ್ವಯ ಮಧು ಛಂದೋ
ನಾಟ್ಯ ಲಯ ವಿಲಯ ವಿಪ್ಲವ !
ಅದ್ಭುತ ಸೋನಾರ್ ಬಂಗಾಳ !
ನೀನಾಗು ಶುಭ್ರ ಬಂಗಾರ !
ನಿನಗಿರಲ್ಕೆ ದೈವ ರಕ್ಷೆ !
ಓಂ ಶಾಂತಿ ಶಾಂತಿ ಶಾಂತಿಃ

— o —

ಜೈ ಭಾರತ !

ಜೈ ಭಾರತ ! ಜೈ ಭಾರತ !
ಜೈ ಭಾರತ ! ಜೈ ಜೈ ಜೈ !
ಜೈ ವೇದಾಂತ ಸಂಸ್ಕೃತಿ !
ಜೈ ಅಹಿಂಸಾ ತತ್ತ್ವಮತಿ
ಜೈ ಸತ್ಯ ಧರ್ಮ ಸಹ ಚಿಂತನೆ !
ಜೈ ಕ್ಷಾತ್ರ ಧರ್ಮ ಪರಿಪಾಲನೆ !
ಜೈ ಈಶ್ವರ ಕೃಪಾ ಬಲಕೆ !
ಜೈ ಸ್ವತಂತ್ರ ಭಾರತಕೆ !
ಜೈ ಗಾಂಧೀ ಮಹಾತ್ಮನಿಗೆ !
ಜೈ ಗುರುಕುಲ ಮಹೋದಧಿಗೆ !
ಜೈ ನಿರ್ಲಿಪ್ತ ವಿಶ್ವ ಮಹಾ ಶಾಂತಿಗೆ !

— o —

ಎತ್ತಿ ಹಿಡಿ ಸ್ವಾತಂತ್ರ್ಯ ದಿವ್ಯ ಜ್ಯೋತಿ!

ಬಾರಿಸು ಅದ್ಭುತ ಜಯ ಡಿಂಡಿಮವ
ಓ ಬಂಗಾಳ ಜನನೀ !
ಜಯ ಜಯ ಜಯ ಜಯ ಜಯಹೇ !

ನಿಖಿಲ ಜಗಜ್ಜೀವ ಮಿಡಿದ ವೀಣೆ !
ಸಕಲ ಭಾವ ಸ್ಫುರಿತ ವೀರಗಾಥೆ !
ಎದ್ದೇಳು ! ರುದ್ರ ಮನಃಪ್ರಾಣ ಸದ್ಮ !
ಎತ್ತಿ ಹಿಡಿ ಸ್ವಾತಂತ್ರ್ಯ ದಿವ್ಯ ಜ್ಯೋತಿ !

ಮಿಥ್ಯೆಯಿಂದ ಸತ್ಯದೆಡೆಗೆ ಸಾಗು !
ಮೃತ್ಯುವಿಂದ ಅಮೃತದೆಡೆಗೆ ನುಗ್ಗು !
ಕೆಚ್ಚಿನಿಂದ ಕಂಕಣವ ಕಟ್ಟಿ ಬಾಳು !
ಎತ್ತಿ ಹಿಡಿ ಸ್ವಾತಂತ್ರ್ಯ ದಿವ್ಯ ಜ್ಯೋತಿ !

ಕವಿ ಪುಂಗವರ ಅಮೃತ ನೆಲೆವೀಡೆ !
ದಿವ್ಯ ಮಹರ್ಷಿಗಳ ಉಜ್ವಲ ನಾಡೆ !
ಭವ್ಯ ಸಾಸಿಗರ ದುರ್ಧರ್ಷ ಬೀಡೆ !
ಎತ್ತಿ ಹಿಡಿ ಸ್ವಾತಂತ್ರ್ಯ ದಿವ್ಯ ಜ್ಯೋತಿ !

— o —

ಒಂದೇ

ಒಂದೇ ಒಂದೇ ಒಂದೇ
ನಾವೆಲ್ಲರೂ ಒಂದೇ !
ಭಾರತ ಭುವಿಯಲಿ ಜೀವನ
ಬೆಳಗಿರೆ ನಾವೆಲ್ಲರೂ ಒಂದೇ
ಹಿಂದು ಮುಸಲ್ಮಾನ ಕ್ರೈಸ್ತರು
ಆ ಮತ ಈ ಮತ ಎಲ್ಲವೂ
ಒಂದೇ ಒಂದೇ ಒಂದೇ !

ಮಾತೃಭೂಮಿ ಸೇವೆಗೆಂದು
ಒಂದುಗೂಡಿ ದುಡಿಯಲೆಂದು
ಇಲ್ಲೆ ಹುಟ್ಟಿ ಇಲ್ಲೆ ಬದುಕಿ
ಇಲ್ಲೆ ಮಣ್ಣು ಸೇರಲೆಂದು
ಒಂದೇ ಒಂದೇ ಒಂದೇ

ಪಣವ ಕಟ್ಟಿ ಭಾರತೀಯರೆ !
ಏನೇ ಬರಲಿ, ಏನೆ ಇರಲಿ,
ಧೈರ್ಯದಿಂದ ಎದುರಿಸಿ ನಿಲ್ಲೆ
ಬಡವ ಬಲ್ಲಿದರೆಲ್ಲರಿಂದು
ಒಂದೇ ಒಂದೇ ಒಂದೇ

— o —

ಬಾರಿಸು ಜಯಭೇರಿ

ಬಾರಿಸು ಜಯಭೇರಿ ಹೇ ಬಂಗಾಳ ಜನನಿ !
ಜಯ ಜಯ ಜಯ ಜಯ ಜಯತೇ !

ಸ್ವಾತಂತ್ರ್ಯ ಸಂಗ್ರಾಮದಲಿ ಕೆಚ್ಚಿನಿಂ ಹೋರಿ
ಪರಮ ಜಯಗಳಿಸಿದ ಸಾಸಿಗರ ಭುಜತಟ್ಟಿ
ಬಾರಿಸು ಜಯಭೇರಿ ಹೇ ಬಂಗಾಳ ಜನನಿ !
ಜಯ ಜಯ ಜಯ ಜಯ ಜಯತೇ !

ಸ್ವಾತಂತ್ರ್ಯ ಸಂಗೀತವ ಒಕ್ಕೊರಲಿನಿಂ ಪಾಡಿ
ಧವಳ ಕೀರ್ತಿಯ ರಾಷ್ಟ್ರ ಬಾವುಟ ಎತ್ತಿ ಹಿಡಿದು
ಬಾರಿಸು ಜಯಭೇರಿ ಹೇ ಬಂಗಾಳ ಜನನಿ
ಜಯ ಜಯ ಜಯ ಜಯ ಜಯತೇ !

ಹರುಷದಿ ಮಿಡಿಸಲಿ ಜಗಹೃದಯ ಭೈರವ ಭೇರಿ
ಲೋಕಾಲೋಕದೊಳ್ ನಲವಿಂ ಮೊಳಗುವಂದದಿ !
ಬಾರಿಸು ಜಯಭೇರಿ ಹೇ ಬಂಗಾಳ ಜನನಿ !
ಜಯ ಜಯ ಜಯ ಜಯ ಜಯತೇ !

— o —

ಭಾರತ ಜನನಿ

ಕೇಳಿನ್ನೊಡೆಯಾ ! ಎದೆಯೊಳ್ ಪೊಣ್ಮಿದ
ಅಭಿಲಾಷೆಯಂ ಮುಂದಿಟ್ಟು ತದೇಕ
ಚಿತ್ತದಿಂದಲಿ ಬೇಡುವೆ ಸೆರಗೊಡ್ಡಿ
ದಯೆಗೈದು ಕರುಣಿಸು !

ಕೀರ್ತಿಯೆನಗೆ ಬೇಡವೀ ಜನುಮದಲಿ
ಅಧಿಕಾರ ಮೇಣೈಶ್ವರ್ಯಬೇಡಪ್ಪ
ನಾಕ ನರಕಗಳ ಗೊಡವೆ ಬೇಡೆನಗೆ
ಮೋಕ್ಷವ ಬೇಡೆ ಪರೋಕ್ಷದಲಿಯುಂ
ಎನಗೆ ನೀ ಮರು ಜನ್ಮವೀಯುವೊಡೆ
ಕೃಪೆಯಿಟ್ಟು ಪುಟ್ಟಿಸೆಲೈ ಸ್ವಧರ್ಮದೊಳೆ,
ಮೇಣ್ ಪುಣ್ಯಭೂಮಿ ಭಾರತ ಜನನಿಯು
ಘನ ಸುಂದರ ತೊಟ್ಟಿಲಿನಲಿ !

— o —

ಬಂಗಾಳ ಸೋದರಿ

ಅಪರ ಪ್ರಾಂತ ಅಸಹನೀಯ
ಪರಮ ಧೂರ್ತ ಪದಹತಿಗೆ ಸಿಲ್ಕಿ
ಕಂಗೆಟ್ಟು ದೆಸೆಗೆಟ್ಟು
ದೈನ್ಯದಿ ರಕ್ಷೆಯನೋಂತು
ಬೆದರಿ ಬಿದ್ದೆದ್ದು ಓಡೋಡಿ
ಬರುತಿದೆ ನುಗ್ಗಿ ನುಗ್ಗಿ
ಲಕ್ಷ ಲಕ್ಷ ಲಕ್ಷ ಲಕ್ಷ
ದೀನ ಜನರ ಬೃಹತ್ ಬೃಂದ
ದುರ್ದಮನೀಯ ಪಾಶವೀಬಲದ
ವಿದ್ವೇಷ ವೈರದಲಿ ಸುಟ್ಟು ಬಗೆಗೆಟ್ಟು
ಸ್ವಜನರು ಪರಜನರು
ಬಲಿಯಾಗುತ್ತಿರೆ ರಕ್ತ ಪಿಪಾಸುಗಳಿಗೆ
ನೋಳ್ಪ ಕಣ್ಣೆದುರೆ
ಕಳೆದುಳಿದ ಬಂಗಾಳಿಗಳು
ಹೆದರಿ ಚೀರಿ ಚೀತ್ಕರಿಸಿ
ಮನೆ ಮಠಗಳ ಬಿಟ್ಟೋಡಿ
ಸುರಿವ ನೆತ್ತರಂ ಕಡೆಗಣಿಸಿ
ದುಃಖದಿಂ ತತ್ತರಿಸಿ

→

ಉಟ್ಟ ಬಟ್ಟೆಯಲಿ
ಅಳು ಮಕ್ಕಳ ಹೊತ್ತು
ನಿತ್ರಾಣಿಗಳನೆಳೆದುಕೊಳ್ಳುತ
ಜೋಲುತ ವಾಲುತ
ಉಸ್ಸನೆ ನಿಡುಸಿರ್ಗರೆದು
ಕಂಗಳಲಿ ಕಂಬನಿಯ ಸೂಸಿ
ಆರ್ತತೆಯಲಿ ಅಳಲನೆ ತೋಡಿ
ಅಸ್ತವ್ಯಸ್ತವಾಹಿನಿ
ಸಂತ್ರಸ್ತ ದುರವಸ್ಥೆಯಲಿ
ಗೋಳಿಡುತ ನುಗ್ಗಿ ಬರುತಿದೆ !
ದೀನರ ದುಃಖಿಗಳ
ಅನಾಥರ ಅಸಹಾಯಕರ
ನಿಸ್ತೇಜಿಗಳ ನಿರಾಶ್ರಿತರ
ಬಾಳೊಡೆದ ಗೋಳು !
ಕರುಳಂ ಹರಿವಂದದಲಿ
ಸರಳ್ದನಿ ಹೊಮ್ಮಿದತ್ತು
ಹಗಲಿರುಳೆನ್ನದೆ
ಅಮಿತ ಸಂಕಟವಂ ಕಾರಿ,
ಮಾನಹಾನಿ ಪ್ರಾಣಹಾನಿ
ಅರ್ಥಹಾನಿ ದುಳ್ಳುರಿಯಲಿ ಬೆಂದು
ರಕ್ಷೆಯನೋಂತು ಓಡಿ ಬರುತಿರೆ
ಕರುಣೆಯಿಲ್ಲದಿನಿತು

ಅತ್ತಲಿಂದ ಇತ್ತಲಿಂದ
ಹಿಡಿದುವು ಧೂರ್ತ ಕೋವಿಗಳು
ಭಯಂಕರ ಘರ್ಜನೆಯಲಿ.
ಧರೆಗುರುಳಿದವರ ಕೆನ್ನೀರು
ತಾ ಜಳ ಜಳ ಜಳ ಚೆಲ್ಲಿ
ಫಲವತ್ತಾದುದು ಕ್ರಾಂತಿಭೂಮಿ
ಪತಿ ಸುತರಳಿಯೆ ಗಡಿಯಲಿ
ಅಳಲಿನಿತು ಉಸುರಿಲ್ಲದೆ
ಉಳಿದ ಮಕ್ಕಳೊಡನೆ
ಓಡಿ ಬರುತಿಹಳೇ ತಾಯಿ ?
ಹಾ ! ನಿನ್ನವರೆಲ್ಲಿನೆ ಬಹುದೇ ಬಾಯಿ ?
ವಸಿಯುಡುಗಿದೆ ಮೈಮರವಟ್ಟಿದೆ
ನರ ನಾಡಿಯು ಕಂಡರಿಸಿವೆ
ನುಡಿಯಲಾರಳೋ ಮಡದಿ,
ಹಾ........!
ಅದುವೆ ಲೇಸಲ್ತೆ ?
ಇಂದಿನ ಉತ್ಕಟ ಪರಿಸ್ಥಿತಿಗೆ.
ಹರೆಯದ ಮಗಳನು
ಧೂರ್ತರಳಿದೊಯ್ದರು !
ಮಡದಿಯ ಬಿಡಿಸಲೋದ ಪತಿಗೆ

ಭೀಮದರ್ಶನವಾಯ್ತು ಕತ್ತಿಯಲುಗಿನಲಿ
ಹಸು ಮಕ್ಕಳನೊಗೆದರು
ಧಗಧಗ ಉರಿವಗ್ನಿಯಲಿ !
ಕೆಲವಂ ಕೊಚ್ಚಿಕೊಂದರು
ಕರುಣೆ ಇಲ್ಲದಂತೆನೆ.
ರಕ್ಕಸಾವೇಶದ ಕ್ರೀಡಾವೋಪ
ತಾಂಡವಾಡಿತು ರಣಭೈರವನಂದದಿ !
ಎಲ್ಲವನರಿತು—ತಿಳಿದು
ಎಂತು ಸಂತೈಸಲಿ ನಿನ್ನಂ ಸೋದರಿ
ಅಂತುಟು ಶಬ್ದ ಭಂಡಾರವೆನ್ನ
ಹೃದಯ ನಿಘಂಟಿನಲಿಹುದೇ ?
ನೀನ್ ಹೇಳು ಭಗಿನಿ !
ನಮ್ಮೊಲ್ಮೆಯ ಜನನಿ ಭಾರತಿ
ನಿನಗಾಗಲಿ ನಲ್ಮೆಯ ರಕ್ಷೆ !
ಮಹಾತಾಯಿ ಕಾಳಿ
ನಿನಗಾಗಲಿ ಅನುಪಮ ರಕ್ಷೆ ;
ಕ್ಷಾತ್ರ ತೇಜಸ್ವಿನಿ ದ್ರೌಪದಿ
ನಿನಗಾಗಲಿ ದಿವ್ಯರಕ್ಷೆ ;
ಶ್ರೀರಾಮನರಸಿ ಸೀತೆ
ನಿನಗಾಗಲಿ ನೇಹದ ರಕ್ಷೆ

ಓ ಬಂಗಾಳ ಸೋದರಿ ;
ನಿನಗೆ ನೀನಲೆ ಚಿಚ್ಛಕ್ತಿ ರಕ್ಷೆ
ಹಗಲಿರುಳ್ ಬೇಡುವೆ ನಿನಗಂ
ಭಗವಂತನ ಕಾಲ್ಪಿಡಿದು !
ಹಾ........ !
ಅಸ್ವಾತಂತ್ರ್ಯ ಜೀವನದಿ
ಪಶುಗಳಂದದಿ ಬದುಕಿ
ಕಡು ಬಡತನದಾ
ಕಹಿಯನುಂಡು
ನರಳುತಿರ್ದ ಜನಕೋಟಿ
ಚೇತರಿಸಿಕೊಳ್ವ ಮುನ್ನವೆ
ಕೈ ಬೀಸಿ ಕರೆಯುತೇ ದುರ್ವಿಧಿ
ಈ ಪರಿಯು ಪ್ರಕಾಂಡದಲಿ
ಹಾ ! ಕಷ್ಟಂ ; ಕಡುಕಷ್ಟಂ !
ಅಬಲೆಯರ ಪರಿಪಾಡು !
ಓದಿ....ಓದಿ....ಓದಿ
ಪತ್ರಿಕಾ ವರದಿಯಂ
ಕೇಳಿ....ಕೇಳಿ....ಕೇಳಿ....

→

ಬಾನುಲಿ ವಾರ್ತೆಯಂ
ಮರುಗಿ ಕರಗಿ ಕಡುದುಃಖದಲಿ
ದೇಹ ಕುಸಿಯುತ್ತಿರುವವೋಲ್
ಪ್ರಭಾಸವಾಯ್ತಲಾ,
ಹರಿವ ನೆತ್ತರು ಹೆಪ್ಪುಗಟ್ಟಿದಂದದಿ
ದೇಹ ಭಾರಾಂತು ಕಣ್ಣೊಸರಿದುವು
ಲವಣಾಶ್ರು ಕೋಡಿಯಂ.

— o —

ತೇಜೋಮತಿ ಭಾರತಿ

ತಾಯಿ ತೇಜೋಮತಿ ಭಾರತೀ
ತವ ಪುಣ್ಯಸ್ತನ್ಯ ಪೀಯೂಷಂ
ನೀಡಲೆಮಗೆ ನವರಣದೀಕ್ಷೆ
ಮೇಣ್ ವರರಾಷ್ಟ್ರರಕ್ಷೆ !

ನರನಾರಿ ನಡುವಣ ಕಿರುಮನದ
ಭೇದವನು ಕಿತ್ತೊಗೆದು ನಿನ್ನಯ
ಪಾದಸೇವೆಗೆ ಸಮತಾ ತೈಲದಿ
ನಿತ್ಯ ನಂದಾದೀಪವನುರಿಸು !

ಸೊಕ್ಕಿದವರ ಕುಕ್ಕಿ ತಗ್ಗಿಸಿ
ಧರ್ಮ ನೀತಿಯುಂ ನೆಗಹಿ ಬೆಳಸಿ
ಹರಡು ತ್ರಿಸತ್ಯಂ ಜಗದಗಲಕೆ
ಹೇ, ಶಾಂತಿರೂಪಿಣೆ ಭಾರತ ಜನನಿ !

— o —

ಡಮು ಡಮು ಡಮು ಡಮು !
ಭೂಂ ಭೂಂ ಭೂಂ ಭೂಂ !

ಬಾರಿಸೈ ಜಯಡಿಂಡಿಮ ಡಮು ಡಮು !
ಸತ್ಯ ತೋರೆ ನಗ್ನ ಸತ್ಯ ಭೂಂ ಭೂಂ !
ಡಮು ಡಮು ಡಮು ಡಮು !
ಭೂಂ ಭೂಂ ಭೂಂ ಭೂಂ !
ಕುಹಕಿ ಪಾಕಿಸ್ತಾನದ ರಕ್ತದಾಹ
ಮಿಾರಿ ರಕ್ಕಸಾವೇಶದಲಿ ಹೊಮ್ಮಿ
ಕೊಲೆಗೈದು ಕೋಟಿ ಕೋಟಿ ಸ್ವಜನರಂ,
ಮಾನ ಭಂಗಗೈಯೆ ಮಾನವತಿಯರಂ !
ಸಹಿಸಲಾಗದೊರಲುತಿರೆ ಕೊರಳೆತ್ತಿ
ಸಂತ್ರಸ್ತ ಜನತೆ ದುಃಖಾಶ್ರು ಹರಿಸಿ
ಸಹಾಯ ಕೋರಿ ಬಾಂಗ್ಲಾ ದೇಶದಲಿ !
ಮಕ್ಕಳ ಭಂಗವ ನೋಡಲಾಸಳವೆ
ಅಭಯುಸ್ತ ತೋರೆ ಕಾರುಣ್ಯದಿಂ
ಭಾರತ ಜನನಿ ಕಾಲೋಚಿತಮಪ್ಪಿ.
ಮೃತ್ಯುಕಾತರತರ ಕರಾಳ ರಾತ್ರಿ
ಹರಿದು, ಭೋರ್ಗರೆವ ಸಾಗರಸಮ ನಿಜ
ಜಯಶ್ರೀ ಒಲಿದು ಬರೆ ನಲಿದೆತ್ತಿದಳ್
ಮಂಗಳಾರತಿ ಬಂಗಾಳ ಧಾತ್ರೀ
ತಾಯಿ ಭಾರತಿಯ ದಿವ್ಯ ಪಾದಾಂಬುಜಕೆ !

— o —

ಹೇ ತಾಯಿ ದಿವ್ಯ ಭಾರತಿ !

ಹೇ ತಾಯಿ ದಿವ್ಯ ಭಾರತಿ !
ಎತ್ತುವೆನು ಮಂಗಳಾರತಿ !
ಶುಭವಾಗಲಿ ಜಯವಾಗಲಿ
ಎಂದು ಜಯ ಗೀತವ ಪಾಡಿ !

ಸಿದ್ಧಿ ಬುದ್ಧಿ ವೃದ್ಧಿಯಾಗಿ
ವ್ಯೈದೋರಲಿ ಸ್ಥಿರ ಶಾಂತಿ
ನಿನ್ನಡಿಯ ವರ ತೊಟ್ಟಿಲಿಸಲಿ !

ಹೇ ತಾಯಿ ದಿವ್ಯ ಭಾರತಿ !
ಎತ್ತುವೆನು ಮಂಗಳಾರತಿ
ಶುಭವಾಗಲಿ ಜಯವಾಗಲಿ
ಎಂದು ಜಯ ಗೀತವ ಪಾಡಿ

ಅಂದಿನ ಕನಸು ನನಸಾಗಿ
ಕೈಗೂಡಲಿ ಕವಿ ಭಾವಾಗ್ನಿ
ಮನಃಪ್ರಾಣ ಚಿನ್ಮಯಾಗ್ನಿ !

— o —

ಬಂಗಾಳ ಧಾತ್ರಿ !

ಭಾರತ ಜನನಿಯ ಅವಿಭಾಜ್ಯ ಭಗಿನೀ,
ಹೇ, ಹೇಮೋಜ್ವಲ ಬಂಗಾಳ ಶ್ರೀವಸತೆ !
ದಿಶೆದಿಶೆಯಲಿ ಜಯಭೇರಿ ಹೊಡೆದಿದೆ
ಮೊಳಗಲಿ ನಿರಂತರ ಜಯ ಜಯ ಜಯತೇ !
ಘನ ಘೋರ ಕಲ್ಮಷವನೆ ಕಿತ್ತಿಹೆ
ಸಮಗ್ರ ದೇಶದ ಹೊಸ ರಚನೆಗೈ ನವಜಾತೆ !
ಭಾರತ ಮಹಾಸೇನೆಯಚಲ ಛಲ
ಬಂಗಾಳ ಜನತತಿಯಾತ್ಮಬಲ
ಅತೀವ ವಿಷಮತರ ಸಂಸ್ಥಿತಿಯಲಿ
ಎಣೆಯಿಲ್ಲದೆ ಹರಿದಿಹ ನೆತ್ತರ ಬಲಿ
ನೀಡಲಿ ಸತತ ದಿವ್ಯ ರಾಷ್ಟ್ರ ತೇಜ !
ಜಾತಿ ನೀತಿಯ ಕ್ಷುದ್ರತರ ತಾರತಮ್ಯವ
ಕಿತ್ತೊಗೆದು ಬಲುಮೆಯ ಕಿಡಿಯುರಿಸಿ
ನೊಂದ ಸತಿಯರ ಜೆಂದ ಮಾತೆಯರ
ಕಂಬನಿ ಕಡಲ ಕೋಡಿಯನೊರಿಸಿ
ನೀಡು ಸಾಂತ್ವನವ ಬಲುಮೆಯಿಂ
ಭಾರತ ಜನನಿಯ ಚಿದಂಬರೋಜ್ವಲ
ಅನುಪಮ ಪ್ರೇಮ – ಸ್ನೇಹಾಂಬುಧಿಯೊಳ್
ಹೇ, ಸೋನಾರ್ ಬಂಗಾಳ ಧಾತ್ರಿ !

— o —

ಕೈ ಮುಗಿಯೋಣ........!

ಹಣೆ ಮಣಿಯೋಣ ಬಾ ಬಾರೆ ಗೆಳತೀ!
ಸಭದಲಾಡ ವ ಭಾರತ ಬಾವುಟಕೆ !
ನವ ಚೇತನದುಂಬಿದ ನೋಂಪಿನಲಿ
ಕೈ ಮುಗಿಯೋಣ ಬಾ ಬಾರೆ ಗೆಳತೀ !
ಸಂಭ್ರಮದಿ ಶುಭೋದಯವಾಯಿತೆಂದು
ಸಂತಸದಿ ಸ್ವಾತಂತ್ರ್ಯಗೀತೆ ಪಾಡಿ !
ಒಕ್ಕೊರಲಿಂ ಜಯ ಘೋಷವ ಮಾಡಿ !
ಜನ್ಮ ಜನ್ಮಗಳ ಸುಕೃತ ಸತ್ಯಫಲ
ಕೈಗೂಡಿ ಬಂದು ನಲಿಯುತಿದೆ ಬಾನ್ದಲದಿ
ತ್ರಿವರ್ಣರಂಜಿತ ಬಾವುಟ ವೇಶದಲಿ !
ಭೀಷಣತರ ಪಾರತಂತ್ರ್ಯ ಕಿತ್ತೊಗೆದು
ಸಾನುರಾಗದಿ ಹಾರುತಿಪ ಬಾವುಟಕೆ
ಹಣೆ ಮಣಿಯೋಣ ಬಾ ಬಾರೆ ಗೆಳತೀ !
ಕೈ ಮುಗಿಯೋಣ ಬಾ ಬಾರೆ ಗೆಳತೀ !

— o —

ಜಯ ಭಾರತ

ಜಯ ಭಾರತ ಜಯ ಭಾರತ
ಜಯ ಜಯ ಜಯ ಜಯ ಜಯಹೇ !

ವಿಶ್ವ ಪ್ರಜ್ಞೆಗೆ ಶಾಂತಿ ಸಮರದ
ತಾದಾತ್ಮ್ಯ ಭಾವಶ್ರೀ ತೋರಿಸಿ
ಕೆಚ್ಚಿನಿಂ ಅಚ್ಚರಿವೊಡೆಸಿದ
ದಿವ್ಯ ಸ್ವಾತಂತ್ರ್ಯ ವರೂಥ !

ಜಯ ಭಾರತ ಜಯ ಭಾರತ
ಜಯ ಜಯ ಜಯ ಜಯ ಜಯಹೇ !

ಮಹಾ ಮುನಿ ಪುಂಗವರ ಲಾಲಿಸಿ
ಜ್ಞಾನಿ-ಕವಿ-ಕಲಾವಿದರ ಬೆಳಸಿ
ವೈಮೆಯಿಂ ಕೀರ್ತಿವೆತ್ತ
ದಿವ್ಯ ಸ್ವಾತಂತ್ರ್ಯ ವರೂಥ !

ಜಯ ಭಾರತ ಜಯ ಭಾರತ
ಜಯ ಜಯ ಜಯ ಜಯ ಜಯಹೇ !

— o —

ವಂದೇ ಅಖಿಲ ಕರ್ಣಾಟಕ ಜನನಿ !

(ನಾಡ ಗೀತೆಯೊಂದರಿಂದ ಪ್ರಭಾವಿತ)

ವಂದೇ ಅಖಿಲ ಕರ್ಣಾಟಕ ಜನನಿ !
ಸಸ್ಯ ಶ್ಯಾಮಲ ಪಚ್ಚ, ಪುಣ್ಯೋಜ್ವಲ ಧರಣಿ !
ನಮಾಮಿ ತವ ಸುಂದರ ಚರಣ ಚೇತಮಣಿ !

ಸುನೀಲ ಸುಂದರ ಕಾವೇರಿ ತಟಾಕ ಸ್ಥಲೇ
ಚೆಂದ ಮಂದಾನಿಲ ಪ್ರಕಂಪಿತ ಪುಷ್ಪ ಕೋಮಲೇ
ಚಂದಿರ ಚುಂಬಿತ ಭವ್ಯ ಗಿರೀಂದ್ರ ವರಬಾಲೇ
ಸಚಿತ್ರ ಧವಳ ತುಷಾರ ಕಿರೀಟಿನೀ !

ನಿತ್ಯ ಪವಿತ್ರ ಸುಪ್ರಭಾತ ಮಂಗಲ ಗಗನೇ
ವಿದ್ಯಾ ಪ್ರಚಾರಿತ ಜ್ಞಾನ ಮಾಧುರ್ಯ ಭುವನೇ
ದಿವ್ಯ ಸಾಮಗಾನ ಮುಖರಿತ ತಪೋವನೇ
ಸತ್ಯ ಧರ್ಮ ಸಮುದಿತ ಕಾವ್ಯ ಕಾಮಿನಿ !

ತವ ಪುಣ್ಯಸ್ತನ್ಯ ಪೀಯೂಷ ಸುಖವಾಹಿನಿ
ತುಂಗ-ಭದ್ರಾ ಜಲ ಧೌತ್ಯ ವಿಸ್ತೃತ ಕಾರುಣ್ಯ ಗಣಿ
ದೇಶದೇಶಾಂತರೆ ವಿತರಿತ ಪ್ರಸಿದ್ಧ ಅನ್ನಾ
ನೀಂ ಧನ್ಯಾ ಹೇ ಕರ್ನಾಟಕ ಜನನೀ
ವಂದೇ ವಂದೇ ವಂದೇ !

— o —

ಮಲ್ಲಿಕಾ ಕೃತಿಗಳು

(ಕಾದಂಬರಿಗಳು)

೧) ಜೀವನಗಂಗಾ
೨) ಡಾ|| ಅಘೋರ
೩) ಡಾ|| ಕಮಲೇಶ್
೪) ವಂದೇ ಮಾತರಂ
೫) ಅನಂತಾನಂತದೆಡೆಗೆ

(ಕಥಾ ಸಂಕಲನ)

೬) ಲಿಯೋನಾ (ಅಚ್ಚಿನಲ್ಲಿ)
೭) ಶ್ರೀಮುಖಿ
೮) ಬಹುರತ್ನಾವಸುಂಧರಾ
೯) ರತ್ನಗರ್ಭಾವಸುಂಧರಾ
೧೦) ವೈಶಾಖೀ ಪರ್ವ
೧೧) ಫಾಲ್ಗುಣೀ ಪರ್ವ
೧೨) ರಮಣೀಮಣಿ
೧೩) ಶ್ರೀಹರ್ಷಲಾ

(ಕವಿತಾ ಸಂಕಲನ)

೧೪) ಪೂಜಾವಸಾನ ಸಮಯೇ....!
೧೫) ಧ್ಯಾನಾವಸಾನ ಸಮಯೇ....!
೧೬) ಗಾನ ತೀರ್ಥ

(ಪೌರಾಣಿಕ ನಾಟಕ)

೧೭) ಪುಣ್ಯಪಯೋನಿಧಿ
೧೮) ಪುಣ್ಯಾಭಿಸಾರ

(ಇವುಗಳ ಪ್ರತಿಗಳು ಮುಗಿದಿವೆ)

ಮಲ್ಲಿಕಾ ಕೃತಿಗಳು

(ಸಾನೆಟ್ಟುಗಳು)

೧೯) ತರಂಗಿಣಿ ೧೫—೦೦

(ಕಾದಂಬರಿಗಳು)

೨೦) ಮನೋನ್ಮಣಿ ೨೦—೦೦

೨೧) ಸಂತ್ರಾಸಿನಿ ೨೪—೦೦

೨೨) ಆಸೆಯ ಸುಳಿಯಲ್ಲಿ ೨೦—೦೦

(ಕವಿತಾ ಸಂಕಲನ)

೨೩) ಗಗನ ಕುಸುಮ ೧೦—೦೦

೨೪) ಜೀವನ ಕುಸುಮ ೧೦—೦೦

೨೫) ಕಸ್ತೂರಿ ಮಾಲಿಕಾ ೧೦—೦೦

೨೬) ಮಂದಾರ ಮಾಲಿಕಾ ೧೦—೦೦

೨೭) ಚಂಪಕ ರಾಜಿ ೧೦—೦೦

೨೮) ನಾದ ಬಿಂದು ೧೦—೦೦

೨೯) ವಿಜಯ ಗಾಥಾ ೬—೦೦

(ಸಂಜೀವನ ಕಾವ್ಯ)

೩೦) ರಾಗಾನುರಾಗಿಣಿ ೧೫—೦೦

೩೧) ಉತ್ತರೋತ್ತರಣಿ ೧೫—೦೦

(ಗದ್ಯ ಕಾವ್ಯ)

೩೨) ಐಂದ್ರ ಕೀರ್ತಿ ಕೇತನಂ ೩೬—೦೦

(ಉಪನಿಷತ್ಕಥಾ)

೩೩) ಕೃತಂ ಸ್ಮರ ಕ್ರತುಂ ಸ್ಮರ ೩೦—೦೦

(ಶಿಶು ಸಾಹಿತ್ಯ)

೩೪) ದೂರ ದೇಶದಲ್ಲಿ ೫—೦೦

೩೫) ಬೆಳದಿಂಗಳ ರಾತ್ರಿ ೫—೦೦

೩೬) ವಿಶೇಷ ಸುದ್ದಿ ೫—೦೦

೩೭) ರಂಗನ ಸಾಹಸ ೫—೦೦

(ದೇಶಭಕ್ತಿ ಗೀತೆ)

೩೮) ವಿಜಯ ಗಾಥಾ ೬—೦೦

ಲಕ್ಷ್ಮೀ ಪ್ರಕಾಶನ

7, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು-560 025